ಅಧ್ಯಯನ ಮಾಡುವಾಗ ಒಂದು ಧರ್ಮಕ್ಕೇ ವಿಶಿಷ್ಟವಾದ ಯಾವುದಾದರೂ ಆಧ್ಯಾತ್ಮಿಕ ಮೌಲ್ಯವುಳ್ಳ ಸಂಗತಿ ದೊರಕಿದರೆ, ಅದನ್ನು ನಾವು ನಮ್ಮ ಒಟ್ಟು ಆಧ್ಯಾತ್ಮಿಕ ಪರಂಪರೆಗೆ ಸೇರಿಸಿ ಕೊಂಡು ಅದಕ್ಕೆ ವಿಶ್ವಮೌಲಿಕತೆಯನ್ನು ದೊರಕಿಸಿಕೊಡುವೆವು.

ಸ್ವಾಮಿ ವಿವೇಕಾನಂದರು ವಿಶ್ವಧರ್ಮದ ಸಾಕ್ಷಾತ್ಕಾರದೆಡೆಗೆ ಒಂದು ಹೆಜ್ಜೆಯಾಗಿ ತೌಲನಿಕ ಧರ್ಮದ ಅಧ್ಯಯನವನ್ನು ಸೂಚಿಸಿದರೂ, ಅಂತಹ ಸಾಕ್ಷಾತ್ಕಾರವು ಶ್ರೀರಾಮಕೃಷ್ಣರ ಕೃಪೆಯಿಂದ ಅವರಿಗೆ ಆ ಮೊದಲೇ ದೊರೆತಿತ್ತು. ಆದರೂ, ತಾವು ಹುಟ್ಟಿದ ಧರ್ಮವನ್ನಲ್ಲದೆ ಇತರ ಧರ್ಮಗಳ ಶಾಸ್ತ್ರ ಗ್ರಂಥಗಳನ್ನೂ ತಾವು ಅಧ್ಯಯನ ಮಾಡಿರುವುದಾಗಿ ಅವರು ಹೇಳುವುದನ್ನು ಗಮನಿಸಬೇಕು. ಎರಡನೆಯದಾಗಿ, ಹಿಂದೂ ಧರ್ಮದಲ್ಲಿ ವೈವಿಧ್ಯತೆಯ ನಡುವೆ ಏಕತೆಯಿರುವುದನ್ನು ಅವರು ಮನಗಂಡಿದ್ದರು; ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳನ್ನು ಅವರು ಒಂದೇ ವೇದಾಂತದ ಬೇರೆ ಬೇರೆ ಸ್ತರಗಳೆನ್ನುವರು; ಶೈವ, ಶಾಕ್ತ, ವೈಷ್ಣವರೆಲ್ಲರೂ ಬೇರೆ ಬೇರೆ ರೀತಿಗಳಲ್ಲಿ ಪೂಜಿಸುವುದು ಒಂದೇ ದೇವರನ್ನು ಎನ್ನುವರು; ಮಧ್ಯಯುಗದ ಆಳ್ವಾರುಗಳ, ಸಿಖ್ಖರ, ಶಾಕ್ತರ, ವೈಷ್ಣವರ, ಕಬೀರನ, ಗುರುನಾನಕನ ಹಾಡುಗಳಲ್ಲಿ ಅವರು ಕಾಣುವುದು ಅದೇ ಉಪನಿಷತ್ತುಗಳ, ವೇದಾಂತದ ನೆಲೆಗಟ್ಟನ್ನೇ. ನಾವು ತೌಲನಿಕ ಧರ್ಮದ ಅಧ್ಯಯನವನ್ನು ಕೈಕೊಳ್ಳಬೇಕೆಂಬ ಅವರ ಸಲಹೆಯು, ವಿವಿಧ ಧರ್ಮಗಳ ಹಾಗೂ ಮತಸಿದ್ಧಾಂತಗಳ ಹಿಂದಿರುವ ಧಾರ್ಮಿಕ ಚಿಂತನೆ ಒಂದೇ ಎಂಬುದನ್ನು ನಾವೇ ಅರಿತುಕೊಳ್ಳಲಿ ಎಂಬ ಉದ್ದೇಶವುಳ್ಳದ್ದಾಗಿದೆ.

# ಮೌನಗುರು ಗಣಪತಿ

**ಕೆ. ವಿ. ಲಕ್ಷ್ಮೀನಾರಾಯಣ**

ನಮ್ಮೆಲ್ಲರ ಅಚ್ಚುಮೆಚ್ಚಿನ ಗಣಪತಿಯನ್ನು ಕುರಿತು ಅನೇಕ ರೀತಿಯ ವ್ಯಾಖ್ಯಾನಗಳಿವೆ. ಅವನ ವಿಚಿತ್ರವಾದ ಆಕಾರದ ಅರ್ಥವೇನು ಎಂಬುದರ ಬಗ್ಗೆ ತಿಳಿಸಿರುವ ಮೈಸೂರಿನ ಈ ಲೇಖಕರು ಆಶ್ರಮದ ಭಕ್ತರಾಗಿದ್ದರು; ಇತ್ತೀಚೆಗೆ ತೀರಿಕೊಂಡಿದ್ದಾರೆ.

ಗಣೇಶಚತುರ್ಥಿ ಪ್ರತಿವರ್ಷವೂ ಬರುತ್ತದೆ. ಆಗ ಎಲ್ಲೆಲ್ಲೂ ಗಣಪತಿಯ ಪೆಂಡಾಲುಗಳು. ಮೈಕಾಸುರನ ಆರ್ಭಟವಂತೂ ಹೇಳತೀರದು. ಗಣಪತಿಯ (ಸ್ವಯಂ)ಸೇವಕರು ರಶೀತಿ ಪುಸ್ತಕ, ಹುಂಡಿ ಡಬ್ಬಗಳೊಂದಿಗೆ ಎಲ್ಲೆಲ್ಲೂ ಹಾಜರು. ಅವರಿಂದ ತಪ್ಪಿಸಿಕೊಳ್ಳುವುದಂತೂ ಬಹಳ ಪ್ರಯಾಸದ ಕೆಲಸ. ಈ ಗಣಪತಿ ಯಾರು? ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ "ಗುರೋಸ್ತು ಮೌನಂ ವ್ಯಾಖ್ಯಾನವ್" ಎಂದು ಬರುತ್ತದೆ. ಶ್ರೀಗಣಪತಿಯೂ ಹಾಗೆಯೇ ತನ್ನ ಕಥೆಯಿಂದ, ಆಕೃತಿಯಿಂದ ಮೌನವಾಗಿ ನಮಗೆ ಅನೇಕ ವಿಷಯಗಳನ್ನು ತಿಳಿಸುತ್ತಾನೆ. ಅವುಗಳಲ್ಲಿ ಕೆಲವನ್ನು ಈಗ ಗಮನಿಸೋಣ.

ಗಣಪತಿಯ ಹುಟ್ಟಿನ ಬಗ್ಗೆ ಪುರಾಣಗಳಲ್ಲಿ ಅನೇಕ ರೀತಿಯ ಕಥೆಗಳು ಇವೆ. ಮುಖ್ಯವಾಗಿ ಅವನು ಗೌರೀಪುತ್ರ, ವಿಘ್ನಕಾರಕ ಮತ್ತು ವಿಘ್ನನಾಶಕ. ವಿಘ್ನಗಳಿದ್ದರೆ ಮಾನವನ ಮನಸ್ಸು ವಿಕಾಸವಾಗುತ್ತದೆ, ಸಂಕಲ್ಪಶಕ್ತಿ ದೃಢಗೊಳ್ಳುತ್ತದೆ. ಕಷ್ಟ ನಷ್ಟಗಳು ಜೀವನದಲ್ಲಿ ಅನಿವಾರ್ಯ. ಆಗ ಭಗವಂತ ನೊಬ್ಬನೇ ನಮಗೆ ಆಸರೆ. ಹಾಗೆ ಅವನು ವಿಘ್ನನಾಶಕನೂ ಕೂಡ. ಅವನು ಯಾವುದೇ ಒಂದು ಪಂಥದ ದೇವರಲ್ಲ. ಎಲ್ಲರೂ ಅವನನ್ನು ಪೂಜಿಸುತ್ತಾರೆ.

ಹಿಂದೂಗಳ ಸಂಘಟನೆಗೆ, ರಾಷ್ಟ್ರೀಯತೆಯ ಪ್ರಚಾರಕ್ಕೆ ಸಾರ್ವಜನಿಕ ಗಣಪತಿ ಉತ್ಸವಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಿದವರಲ್ಲಿ ಮೊದಲಿಗರು ಬಾಲಗಂಗಾಧರ ತಿಲಕರು. ಹಾಗಾಗಿ ಗಣಪತಿಯು ಸಮಾಜ ಸಂಘಟನೆಯ ಮೂಲ ಪುರುಷನೂ, ರಾಷ್ಟ್ರೀಯ ಜಾಗೃತಿಯ ಪ್ರಬೋಧಕನೂ ಆದನು.

ಗಣಪತಿ ಗೌರೀಪುತ್ರನಾಗಿ ಹುಟ್ಟಿದಮೇಲೆ ಒಮ್ಮೆ ಸತ್ತು ಮತ್ತೆ ಆನೆಯ ತಲೆಯೊಂದಿಗೆ ಮರುಹುಟ್ಟು ಪಡೆದನು. ಹಾಗೆಯೇ ಎಲ್ಲರೂ ಒಮ್ಮೆ ಸತ್ತು ಹುಟ್ಟಬೇಕು! ನಾನು ಎಂಬ ದೇಹಭಾವವು ಸತ್ತು, ಪರರಿಗಾಗಿ ಮತ್ತೆ ಹುಟ್ಟಿದಾಗ ಅವನು ಗಣಪತಿ–ಗುಂಪಿನ ಮುಖಂಡನಾಗಲು ಸಾಧ್ಯ. ಬುದ್ಧ, ವಿವೇಕಾನಂದ, ರಮಣ ಮಹರ್ಷಿ ಇವರೆಲ್ಲ ತಮ್ಮ ದೇಹಭಾವವನ್ನು ತ್ಯಜಿಸಿ ಪರರಿಗಾಗಿ ಮರುಹುಟ್ಟು ಪಡೆದು ಮಹಾತ್ಮರಾದರು. ಮುಖಂಡನಾಗಬೇಕಾದರೆ ಮೊದಲು ಸ್ವಾರ್ಥವನ್ನು ತ್ಯಾಗ ಮಾಡಬೇಕು.

ಗಣಪತಿಯ ತಲೆ ಆನೆಯ ತಲೆ, ಕಿವಿಗಳು ವಿಶಾಲ. ಆನೆಯು ಭೂಮಿಯ ಮೇಲಿರುವ ಪ್ರಾಣಿಗಳಲ್ಲೆಲ್ಲಾ ಅತ್ಯಂತ ದೊಡ್ಡದು. ಆದ್ದರಿಂದ ಗಣನಾಯಕನಾಗಬಯಸುವವನು ತನ್ನ ಸ್ವಂತ ಧೋರಣೆಯನ್ನು ಸಾಧಿಸಲು ಪ್ರಯತ್ನಿಸದೆ ಬಹುಜನರ ಅಭಿಪ್ರಾಯವನ್ನು ಸ್ವೀಕರಿಸಬೇಕು. ಗಣಪತಿಯು ಏಕದಂತ. ಅಂದರೆ ಜೀವನದ ಲಕ್ಷ್ಯ, ಗುರಿ ಒಂದೇ ಆಗಿರಬೇಕು. ಇಬ್ಬಗೆಗಳು, ದ್ವಂದ್ವಗಳು ಇರಬಾರದು. ಗಣಪತಿಗೆ ಮೊರದಂಥ ಕಿವಿಗಳಿವೆ. ಮೊರದಲ್ಲಿ ಧಾನ್ಯವನ್ನು ಕೇರಿದಾಗ,



ಹೊಟ್ಟು-ಜೊಳ್ಳು ಬೇರೆಯಾಗಿ ಗಟ್ಟಿಬೀಜ ಉಳಿಯುವಂತೆ ಕೇಳಿದ್ದರಲ್ಲಿ ಹೊಟ್ಟು-ಜೊಳ್ಳುಗಳನ್ನು ಬಿಟ್ಟು, ತಪ್ಪು ತಿಳಿವಳಿಕೆ, ಅಸತ್ಯಗಳನ್ನು ಬೇರ್ಪಡಿಸಿ ಸತ್ಯವನ್ನೇ ಸ್ವೀಕರಿಸಬೇಕು. ಗಣಪತಿಯ ಬಾಯಿಯನ್ನು ಮುಚ್ಚುವಂತೆ ಸೊಂಡಿಲು ಇದೆ. ಆದ್ದರಿಂದ ಎಲ್ಲರ ಅಭಿಪ್ರಾಯವನ್ನು ಕೇಳಿ ಆದರೆ ನಿಮ್ಮ ಅಭಿಪ್ರಾಯವನ್ನು ಸುಲಭವಾಗಿ ತಿಳಿಸಬೇಡಿ. ವೃಥಾ ಮಾತನಾಡಬೇಡಿ, ವಾಕ್ಸಂಯಮವಿರಲಿ ಎಂದು ತಿಳಿಯಬೇಕು. ಗಣಪತಿಯ ಕಣ್ಣುಗಳು ಸಣ್ಣ—ಅಂದರೆ ಸೂಕ್ಷ್ಮದೃಷ್ಟಿ ಇರಲಿ ಎಂದು. ಓಂಕಾರದಂತಹ ಸೊಂಡಿಲು, ಲಂಬೋದರ— ಬ್ರಹ್ಮಾಂಡವನ್ನೇ ತನ್ನಲ್ಲಿ ಉಳ್ಳವನು ಎಂಬುದನ್ನು ಸೂಚಿಸುತ್ತವೆ. ಅದ್ವಿತೀಯವಾದ, ಸರ್ವವ್ಯಾಪಕ ತತ್ತ್ವದ ಪ್ರತೀಕವಾಗಿ ಗಣೇಶನನ್ನು ಶ್ರೀಶಂಕರಾಚಾರ್ಯರು **ಪರಬ್ರಹ್ಮ ರೂಪಂ ಗಣೇಶಂ ಭಜೇಮ** ಎಂದು ತಮ್ಮ ಸ್ತೋತ್ರದಲ್ಲಿ ಸ್ತುತಿಸಿದ್ದಾರೆ.

ಗಣಪತಿಯ ಕೈಯಲ್ಲಿ ಪಾಶ ಅಂಕುಶಗಳಿವೆ. ಆಶಾಪಾಶಗಳಿಗೆ ಬದ್ಧರಾಗಬೇಡಿ ಎಂಬುದನ್ನು ಪಾಶವೂ, ನಿಮ್ಮ ಇಂದ್ರಿಯ ಮನಸ್ಸುಗಳಿಗೆ ಕಡಿವಾಣ ಹಾಕಿ ಎಂಬುದನ್ನು ಅಂಕುಶವೂ ತಿಳಿಸುತ್ತದೆ. ಗಣಪತಿಯ ಇನ್ನೊಂದು ಕೈಯಲ್ಲಿ ಆನಂದದ ಪ್ರತೀಕವಾದ ಮೋದಕವಿದೆ. ಅದು ಸ್ವಾರ್ಥಪ್ರೇರಿತ ಸುಖಾನಂದವಲ್ಲ. ಭಗವಂತನಲ್ಲಿ ಶರಣಾದವರಿಗೆ ಜಗತ್ತು ದುಃಖಮಯವಲ್ಲ, ಆನಂದದ ಬೀಡು ಎಂದು ಇದರ ಅರ್ಥ. ವಿಘ್ನಗಳನ್ನು ಒಡ್ಡುವ ಈ ಗಣಪನೇ ಸಿಹಿಯನ್ನೂ ನೀಡುತ್ತಿದ್ದಾನೆ. ಸುಖ-ದುಃಖಗಳು ದೇಹದಲ್ಲಿರುವವರೆಗೆ ಅನಿವಾರ್ಯ. ಆದರೆ ಶ್ರೇಯಸ್ಸನ್ನು ಬಯಸುವವರಿಗೆ ಭಗವಂತನ ಕರುಣೆಯಿಂದ ಆನಂದ ದೊರೆಯುತ್ತದೆ ಎಂಬ ಆಶ್ವಾಸನೆಯ ಸಂಕೇತ ಈ ಮೋದಕ. ಯಾರು ಪರರ ದುಃಖಕ್ಕೆ ಸ್ಪಂದಿಸಿ, ತಮ್ಮ ಇಂದ್ರಿಯ ಮನಸ್ಸುಗಳನ್ನು ನಿಗ್ರಹಿಸಿ, ಸ್ವಾರ್ಥರಹಿತರಾಗಿ, ಅಂತರ್ಮುಖರಾಗಿ ಪರಹಿತಕ್ಕಾಗಿ ಬಾಳುತ್ತಾರೋ ಅವರಿಗೆ ಯಾವಾಗಲೂ ಭಯವಿಲ್ಲವೆಂದು ಅಭಯ ಮುದ್ರೆ ತಿಳಿಸುತ್ತದೆ.

ಗಣಪತಿಯ ವಾಹನ ಇಲಿ. ಇಲಿಯು ಪ್ರಾಣಿಸಹಜವಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ದುರಭಿಮಾನಗಳ ಪ್ರತೀಕ. ಅದನ್ನು ವಿವೇಕ, ವೈರಾಗ್ಯಗಳಿಂದ ನಿಗ್ರಹಿಸಿ, ದಮನ ಮಾಡಿದಾಗ ಮಾತ್ರ ಸುಖ ಲಭಿಸುತ್ತದೆ. ಗಣಪತಿಯಲ್ಲಿ ಆನೆಯ ತಲೆಯಿದ್ದರೆ, ಹೊಟ್ಟೆಗೆ ಹಾವನ್ನು ಬಿಗಿಯಲಾಗಿದೆ, ಇಲಿಯು ವಾಹನವಾಗಿದೆ. ಹೀಗೆ ಎಲ್ಲರನ್ನೂ ಉತ್ತೇಜಿಸಿ, ದುರ್ಬಲರಿಗೆ, ಶೋಷಿತರಿಗೆ ರಕ್ಷಣೆ ನೀಡಿ, ಸರ್ವರನ್ನೂ ಸಮಭಾವದಿಂದ ನೋಡುವವನೇ ಸಮರ್ಥ ನಾಯಕ. ಹೀಗೆ ಗಣಪತಿಯು ಮೌನವಾಗಿಯೇ ನಮಗೆ ಅನೇಕ ವಿಷಯಗಳನ್ನು ತಿಳಿಸುತ್ತಾನೆ. ✪

## ತಾಯಿಯ ಚಿತ್ರ

ಒಬ್ಬ ಯುವಕ ಉನ್ನತ ವ್ಯಾಸಂಗಕ್ಕಾಗಿ ತನ್ನ ಹಳ್ಳಿಯಿಂದ ನಗರಕ್ಕೆ ಬಂದ. ವಿಶ್ವವಿದ್ಯಾನಿಲಯವನ್ನು ಸೇರಿಕೊಂಡು ಅದರ ಹಾಸ್ಟೆಲ್‌ನಲ್ಲಿ ಇರಲಾರಂಭಿಸಿದ. ಅವನದೇ ಆದ ಒಂದು ಕೊಠಡಿಯಿತ್ತು. ಒಂದೆರಡು ವಾರಗಳ ನಂತರ ಮಗನನ್ನು ನೋಡಲು ಅವನ ತಾಯಿ ನಗರಕ್ಕೆ ಬಂದಳು. ಆಕೆ ದೈವಭಕ್ತೆ ಹಾಗೂ ಒಳ್ಳೆಯ ಹೆಂಗಸೆಂದು ಹಳ್ಳಿಯಲ್ಲಿ ಪ್ರಸಿದ್ಧಳು. ಮಗನ ಕೋಣೆಯಲ್ಲಿ ವ್ಯಾಸಂಗಕ್ಕೆ ಬೇಕಾದ ಪಠ್ಯಪುಸ್ತಕ, ಟೇಬಲಿನ ಮೇಲೆ ಅವನು ಬರೆದಿದ್ದ ಪಾಠಗಳ ನೋಟ್ಸ್— ಇವನ್ನೆಲ್ಲ ಕಂಡು ಆಕೆಗೆ ಸಂತಸವಾದರೂ ಗೋಡೆಯ ಮೇಲೆ ಇವನು ಅಂಟಿಸಿದ್ದ ಅರೆನಗ್ನ ನಟಿಯರ ಚಿತ್ರಗಳನ್ನು ಕಂಡು ದಿಗ್ಭ್ರಮೆಯಾಯಿತು. ಮಗನ ಆಸಕ್ತಿಗಳು ಯಾವ ದಿಕ್ಕಿನತ್ತ ಹೋಗುತ್ತಿವೆ ಎಂಬುದನ್ನು ಅರಿತು ಆಕೆ ಏನೂ ಹೇಳದೆ ಸುಮ್ಮನೆ ಹಿಂದಿರುಗಿದಳು.

ಯಾವುದೇ ರೀತಿಯಲ್ಲಿ ತನಗಾದ ಅಸಮಾಧಾನವನ್ನು ವ್ಯಕ್ತಪಡಿಸದೇ ಮನೆಗೆ ಹಿಂದಿರುಗಿದ ಮೇಲೆ ತನ್ನ ಒಂದು ಭಾವಚಿತ್ರವನ್ನು ತೆಗೆಸಿಕೊಂಡಳು. ಮಗನಿಗೆ ಅದನ್ನು ಕೋಣೆಯಲ್ಲಿ ತೂಗಹಾಕುವಂತೆ ಕಾಗದ ಬರೆದು ಕಳಿಸಿದಳು. ಮತ್ತೊಮ್ಮೆ ನಗರದಲ್ಲಿ ಅವನ ಕೋಣೆಗೆ ಭೇಟಿ ನೀಡಿದಾಗ ಗೋಡೆಯ ಮೇಲೆ ಉಳಿದೆಲ್ಲ ಚಿತ್ರಗಳೂ ಮಾಯವಾಗಿದ್ದವು. ತಾಯಿಯ ಚಿತ್ರ ಮಾತ್ರ ಅಲ್ಲಿತ್ತು. ಆಕೆ ಮಗನನ್ನು ಕರೆದು ಕೇಳಿದಾಗ ಅವನು ಹೇಳಿದ, "ಅಮ್ಮಾ, ನಿನ್ನ ಚಿತ್ರಗಳ ಅಕ್ಕಪಕ್ಕದಲ್ಲಿ ಅವುಗಳು ಹೇಗೆ ತಾನೇ ಸರಿಕಂಡಾವು? ಆದ್ದರಿಂದಲೇ ಅವುಗಳನ್ನೆಲ್ಲ ತೆಗೆದುಹಾಕಿದೆ." ✪